
# ಜಾಗತೀಕರಣದ ಯುಗದಲ್ಲಿ ಜಾಗೃತೀಕರಣ

ಡಾ. ಸಿ.ಕೆ.ಎನ್. ರಾಜ



## "ತ್ರಿಕರಣ"ಗಳ ಪೀಡೆ

ಭಾರತ ನಮ್ಮ ಜನ್ಮಭೂಮಿ. ಸಾಂಸ್ಕೃತಿಕ ಪರಂಪರೆಯ ಹಾಗೂ ಜೀವನಪೋಷಕ ಮೌಲ್ಯಗಳ ನೆಲೆವೀಡು. ವೇದವ್ಯಾಸರು ಮತ್ತು ವಾಲ್ಮೀಕಿಯಂತಹ ಮಹರ್ಷಿಗಳ ಬೀಡು. ರಾಮಾಯಣ ಮಹಾಭಾರತದಂತಹ ಮಹಾಕಾವ್ಯಗಳು, ಉಪನಿಷತ್ತುಗಳು ಮತ್ತು ಆರಣ್ಯಕಗಳು ಒಡಮೂಡಿದ ನಾಡು. ಶ್ರೀಕೃಷ್ಣ ಚೈತನ್ಯ, ರಾಮಕೃಷ್ಣ ಪರಮಹಂಸ, ತುಳಸೀದಾಸ್, ರಾಮದಾಸ್, ಪುರಂದರದಾಸ, ಕನಕದಾಸ ಮೊದಲಾದ ಸಂತರು ಮತ್ತು ದಾಸವರೇಣ್ಯರು ಬದುಕಿ ಬಾಳಿದ ಪುಣ್ಯಭೂಮಿ. ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಮಹರ್ಷಿ ದಯಾನಂದ, ಕರ್ವೆ ಮುಂತಾದ ಚಿಂತನ ಶೀಲ ಸಮಾಜೋದ್ಧಾರಕರು ಬದುಕಿ ಬಾಳಿದ ಪವಿತ್ರಭೂಮಿ.

ಇಂತಹ ಭವ್ಯ ಇತಿಹಾಸದ ಹಿನ್ನೆಲೆಯುಳ್ಳ ನಮ್ಮ ಭಾರತ ೧೯೯೦ರ ದಶಕದಿಂದೀಚೆಗೆ, ಹುಚ್ಚುಹೊಳೆಯಂತೆ ಪ್ರವಹಿಸುತ್ತಿರುವ ಜಾಗತೀಕರಣ ಮತ್ತು ಉದಾರೀಕರಣಗಳ ಪ್ರಭಾವಕ್ಕೆ ಸಿಲುಕಿ ತತ್ತರಿಸುತ್ತಿದೆ. ಋಷಿಗಳ ಸಂತಾನವಾಗಿ ಬೆಳೆದು ಬಂದ ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಮೌಲ್ಯಗಳು ಕಳೆಗುಂದಿವೆ. ಭಾರತೀಯ ಮನಸ್ಸಿನ ಸಂಪನ್ಮೂಲಗಳಾದ ಉನ್ನತ ಮೌಲ್ಯಗಳು ಹಾಗೂ ಜೀವನಾದರ್ಶಗಳು ಅವನತಿಯತ್ತ ಸಾಗುತ್ತಿವೆ. ಈ "ಸಾಂಸ್ಕೃತಿಕ ಮಾಲಿನ್ಯ" ವನ್ನು ಸಕಾಲದಲ್ಲಿ ಎಚ್ಚೆತ್ತು ತಡೆಗಟ್ಟದಿದ್ದರೆ ದೊಡ್ಡ ಅನಾಹುತವನ್ನೇ ನಮ್ಮ ರಾಷ್ಟ್ರ ಎದುರಿಸಬೇಕಾದೀತು. "ತ್ರಿಕರಣ"ಗಳ (ಜಾಗತೀಕರಣ, ಉದಾರೀಕರಣ, ಖಾಸಗೀಕರಣ) ಪ್ರಭಾವದಿಂದ ತತ್ತರಿಸುತ್ತಿರುವ ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ರಕ್ಷಿಸುವ ಮತ್ತು ರಕ್ಷಿಸಲೇ ಬೇಕಾಗಿರುವ ಹರಿಕಾರರೇ ವಿದ್ಯಾರ್ಥಿಗಳು ಮತ್ತು ಶಿಕ್ಷಕರು. ಅವರೇ ಈ "ತ್ರಿಕರಣ"ಗಳ ಪೀಡೆಯಿಂದ ರಾಷ್ಟ್ರವನ್ನು ರಕ್ಷಿಸಲು, ನೈಜ "ಜಾಗೃತೀಕರಣ"ವನ್ನು ಸಮರ ಸನ್ನದ್ಧತೆಯಿಂದ ಪ್ರಾರಂಭಿಸಬೇಕಾಗಿದೆ.

## ಭಾರತಕ್ಕೊಂದು ಉದ್ಧಾರ ಮಾರ್ಗ

"ಎಚ್ಚರಗೊಳ್ಳಿ, ಎದ್ದೇಳಿ, ಗುರಿಮುಟ್ಟುವ ತನಕ ನಿಲ್ಲಬೇಡಿ" ಎಂಬ ಮಹಾಸಂದೇಶದತ್ತ ಇಡೀ ಮಾನವತೆಯ ಗಮನ ಸೆಳೆದ ಸ್ವಾಮಿ ವಿವೇಕಾನಂದರ ಚಿಂತನ ಮತ್ತು ಆದರ್ಶಗಳು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ದಾರಿದೀಪವಾಗಬೇಕು. ಕೇವಲ ಸೈದ್ಧಾಂತಿಕ ಉಪದೇಶಗಳು ಮತ್ತು ಪ್ರವಚನಗಳಿಂದ ಈ ಕಾರ್ಯ ಆಗುವುದಿಲ್ಲ. ಆದರ್ಶಗಳನ್ನು ಕ್ರಿಯಾಶೀಲವಾಗಿ ಅನುಷ್ಠಾನಗೊಳಿಸಿದಾಗ ಮಾತ್ರ ಗುರಿಮುಟ್ಟಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳು ತುಂಬಾ ಪ್ರಸ್ತುತವಾಗುತ್ತವೆ.

'ಭಾರತಕ್ಕೊಂದು ಉದ್ಧಾರಮಾರ್ಗ' ಎಂಬ ವಿಷಯವನ್ನು ಕುರಿತು ಮಾತನಾಡುತ್ತಾ ವಿವೇಕಾನಂದರು ಹೀಗೆ ಹೇಳುತ್ತಾರೆ: "ನೀವೆಲ್ಲ ಕ್ರಿಯಾಶೀಲರಾಗಿ. ತೂಕಡಿಸುತ್ತಿರುವ ಜನತೆಯನ್ನು ಎಚ್ಚರಗೊಳಿಸಿ. ಜೀವನಕ್ಕೆ ಅವಶ್ಯಕವಾಗಿ ಬೇಕಾಗಿರುವ ವಿಷಯಗಳಾದ ವ್ಯಾಪಾರ, ವ್ಯವಸಾಯ, ಮಾರಾಟ ಮುಂತಾದವುಗಳ ಬಗ್ಗೆ ನಮ್ಮ ಗ್ರಾಮೀಣ ಜನತೆಗೆ ತಿಳಿಸಿ. ನೀವಿದನ್ನು ಮಾಡದಿದ್ದರೆ ನಿಮ್ಮ ವಿದ್ಯಾಭ್ಯಾಸ ಮತ್ತು ಸಂಸ್ಕೃತಿಯನ್ನು ಸುಟ್ಟುಹಾಕಿ. ನೀವು ವೇದವೇದಾಂತಗಳನ್ನು ಓದಿ ಹಾಳಾಯಿತು." ನಮ್ಮ ಶಿಕ್ಷಣ ಸಂಸ್ಥೆಗಳು, ಶಿಕ್ಷಕರು, ಹಾಗೂ ಯುವ ವಿದ್ಯಾರ್ಥಿಜನಾಂಗ ಈ ಮಾತುಗಳನ್ನು ಆಲಿಸಿ, ಇನ್ನಾದರೂ ಎಚ್ಚೆತ್ತು ಕ್ರಿಯಾಶೀಲರಾಗಬೇಕು.

## ಶಿಕ್ಷಕರು-ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ಮಾಡಬೇಕಾದ್ದೇನು?

ಇಂದು ಅಂಟುಜಾಡ್ಯದಂತೆ ವ್ಯಾಪಕವಾಗಿ ಹರಡುತ್ತಿರುವ 'ಶೈಕ್ಷಣಿಕ ವ್ಯಾಪಾರೀಕರಣ' ನಮ್ಮನ್ನು ಹಣಗಳಿಕೆ, ದುರಾಸೆ,

ಅಧಿಕಾರಲಾಲಸೆ ಮತ್ತು ಭ್ರಷ್ಟಾಚಾರದತ್ತ ಕೊಂಡೊಯ್ಯುತ್ತಿದೆ. ಇಂದಿನ 'ತ್ರಿಕರಣ ಪೀಡೆ' ಗಳ ಫಲವಾಗಿ ಹಣಗಳಿಕೆಯೊಂದನ್ನೇ ಪ್ರಧಾನವಾಗಿಟ್ಟುಕೊಂಡಿರುವ ಸ್ಪರ್ಧಾತ್ಮಕ ಜಗತ್ತು ಸೃಷ್ಟಿಯಾಗುತ್ತಿದೆ. ನಮ್ಮ ಪರಂಪರಾಗತ ಮೌಲ್ಯಗಳಾದ ವಚನ ಪಾಲನೆ, ಮಾತಾಪಿತೃ ಭಕ್ತಿ, ದೈವಭಕ್ತಿ, ದಾನಗುಣ, ಇತ್ಯಾದಿಗಳು ನಮ್ಮ ಕಣ್ಣೆದುರಿಗೇ ನಶಿಸಿಹೋಗುತ್ತಿರುವುದನ್ನು ನಾವು ತಡೆಗಟ್ಟದಿದ್ದರೆ ನಮ್ಮ ವಿನಾಶ ಖಂಡಿತ. ಇದನ್ನು ಮಾಡುವ ಕಾರ್ಯ ಶಿಕ್ಷಕರಿಂದ ಮತ್ತು ಯುವ ಜನಾಂಗದಿಂದ ಮಾತ್ರ ಸಾಧ್ಯ.

ತ್ರಿಕರಣ ಪೀಡೆಗಳ ಮಾಯಾಜಾಲಕ್ಕೆ ಸಿಲುಕಿರುವ ನಮ್ಮ ಬುದ್ಧಿಜೀವಿಗಳು, ಶಿಕ್ಷಣತಜ್ಞರು, ಶಿಕ್ಷಕರು, ಶಿಕ್ಷಣ ಸಂಸ್ಥೆಗಳನ್ನು ಎಚ್ಚರಿಸುವ ಕಾರ್ಯವನ್ನು ಎಚ್ಚೆತ್ತ ವಿದ್ಯಾರ್ಥಿಗಳು ಇಂದು ಮಾಡಬೇಕಾಗಿದೆ. ಅಂತಹ ವಿದ್ಯಾರ್ಥಿಗಳನ್ನು ಸೃಷ್ಟಿ ಮಾಡುವ ಕಾರ್ಯ ಎಚ್ಚೆತ್ತ ಶಿಕ್ಷಕರಿಂದ ಆಗಬೇಕಾಗಿದೆ. ವ್ಯಾಪಕವಾಗಿ ಹರಡುತ್ತಿರುವ 'ಮಾರುಕಟ್ಟೆ ಸಂಸ್ಕೃತಿ' ಯಿಂದ ನಮ್ಮ ಶಿಕ್ಷಣದ ವ್ಯವಸ್ಥೆಯನ್ನು ನಾವು ವಿಮೋಚನೆಗೊಳಿಸಿ, ಮೌಲ್ಯಾಧಾರಿತ ಶಿಕ್ಷಣದತ್ತ ಗಮನಹರಿಸಬೇಕು. ಈ ದಿಸೆಯಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳು ಚಿಂತನೆ ನಡೆಸಬೇಕು. ಹೀಗೆಂದ ಮಾತ್ರಕ್ಕೆ 'ಉದ್ಯೋಗಾಧಾರಿತ ಶಿಕ್ಷಣ ನೀತಿ' ಗೆ ವಿದಾಯ ಹೇಳಬೇಕೆಂದಲ್ಲ. ಈ ದಿಸೆಯಲ್ಲಿ ನಾವು ಜಪಾನೀಯರಿಂದ ಪಾಠ ಕಲಿಯಬೇಕೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅವರ ಮಾತಿನಲ್ಲೇ ಹೇಳುವುದಾದರೆ– "ಜಪಾನೀಯರು ಐರೋಪ್ಯರಿಂದ ಎಲ್ಲವನ್ನೂ ತೆಗೆದುಕೊಂಡಿದ್ದಾರೆ, ಆದರೆ ಅದೇ ಕಾಲಕ್ಕೆ ಜಪಾನೀಯರಾಗಿಯೇ ಉಳಿದಿದ್ದಾರೆ. ಐರೋಪ್ಯರಾಗಿಲ್ಲ." ನಮ್ಮ ವಿಶ್ವವಿದ್ಯಾನಿಲಯಗಳು ಯುವ ಜನಾಂಗಕ್ಕೆ ಶಿಕ್ಷಣ ನೀತಿಯನ್ನು ರೂಪಿಸುವಾಗ ಈ ಅಂಶವನ್ನು ಗಮನದಲ್ಲಿಡಬೇಕು. ಸ್ವತಂತ್ರವಾದ ಚಿಂತನೆಯನ್ನು ಪ್ರಚೋದಿಸುವಂತಹ ಮತ್ತು ತನ್ಮೂಲಕ ಶಕ್ತಿಶಾಲೀ ವ್ಯಕ್ತಿತ್ವವನ್ನು ನಿರ್ಮಿಸುವಂತಹ ಶಿಕ್ಷಣವನ್ನು ನಾವು ನೀಡಬೇಕು.

## ಶುದ್ಧೀಕರಿಸುವ ಹಸ್ತಗಳು ಮೊದಲು ಶುದ್ಧವಾಗಿರಲಿ

ಅಂತಹ ವಿಶ್ವವಿದ್ಯಾನಿಲಯಗಳು ನಮ್ಮಲ್ಲಿ ಇವೆಯೇ ಎಂಬ ಪ್ರಶ್ನೆಗೆ ಉತ್ತರ ನೀಡುವುದು ನಾವು ತಿಳಿದಿರುವಷ್ಟು ಸುಲಭವಲ್ಲ. ವಿಶ್ವವಿದ್ಯಾನಿಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡುವ ಪ್ರಕ್ರಿಯೆಯೇ ಪ್ರತಿಭೆಯ ಮೇಲೆ ಆಧಾರಿತವಾಗಿಲ್ಲ. ಕುಲಪತಿ ಸ್ಥಾನದ ಆಕಾಂಕ್ಷಿಗಳು ರಾಜಕಾರಣಿಗಳ ಹಿಂದೆ ಸುತ್ತುವುದು ಎಲ್ಲರಿಗೂ ಗೊತ್ತಿರುವ ವಿಷಯ. ನೇಮಕಾತಿಯ ಹಿಂದೆ ಜಾತೀಯತೆ, ಪ್ರಾಂತೀಯತೆ, ಹಣ, ವಶೀಲಿ ಇವುಗಳ ಪ್ರಭಾವವೇ ಪ್ರಧಾನವಾಗುತ್ತಿವೆ. ಇಂತಹ ಭ್ರಷ್ಟಾಚಾರಗಳ ಆಪಾದನೆಗಳು ಬಹುತೇಕ ಸಂದರ್ಭಗಳಲ್ಲಿ ಸತ್ಯಸಂಗತಿಗಳೇ ಆಗಿರುತ್ತವೆ ಎಂಬ ಅಂಶ ವಿಶ್ವವಿದ್ಯಾನಿಲಯಗಳ ಆವರಣಗಳಲ್ಲೇ ಗುಟ್ಟಿನ ಸಂಗತಿಯಾಗಿ ಈಗ ಉಳಿದಿಲ್ಲ. ಪರಿಸ್ಥಿತಿ ಹೀಗಿರುವಾಗ ಶೈಕ್ಷಣಿಕ ಪ್ರಗತಿ, ಶಿಕ್ಷಣ ಮಟ್ಟದ ಸುಧಾರಣೆ, ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕುರಿತ ಮಾತುಗಳು ಅರ್ಥಹೀನವಾಗುತ್ತವೆ. ಬಿಳಿಯ ಬಟ್ಟೆಯನ್ನು ಶುದ್ಧೀಕರಿಸುವ ಹಸ್ತಗಳು ಮೊದಲು ತಾವು ಶುದ್ಧವಾಗಿರಬೇಕು. ಪ್ರತಿಷ್ಠಿತ ಸಂಸ್ಥೆಗಳಾದ ಐ.ಐ.ಟಿ.ಗಳು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ಸಂಶೋಧನಾ ಸಂಸ್ಥೆ ಮೊದಲಾದವುಗಳಿಂದ ನಾವು ಈ ವಿಚಾರದಲ್ಲಿ ಪಾಠ ಕಲಿಯಬೇಕು.

### ಶಿಕ್ಷಣದ ಕಾರ್ಯವೇನು?

ಮಾನವನನ್ನು ಸಚ್ಚಾರಿತ್ರ್ಯ ಹಾಗೂ ಉಪಯುಕ್ತನನ್ನಾಗಿ ಮಾಡುವುದೇ ಶಿಕ್ಷಣ. – *ಯಾಜ್ಞವಲ್ಕ್ಯ*

ಗ್ರಂಥಭಂಡಾರದ ಸಾರವನ್ನೆಲ್ಲ ಹೀರಿದ್ದರೂ ಉತ್ತಮ ನಡವಳಿಕೆಗಳು ಇಲ್ಲದಿದ್ದರೆ ಮತ್ತು ಗಳಿಸಿದ ಜ್ಞಾನ ಸನ್ನಡತೆಯಲ್ಲಿ ವಿನಿಯೋಗವಾಗದಿದ್ದರೆ, ಎಲ್ಲವೂ ನಿರರ್ಥಕ. ಆದ್ದರಿಂದ ಶೀಲವನ್ನು ಸಂವರ್ಧಿಸುವ ಶಿಕ್ಷಣದ ಅಗತ್ಯ ಇಂದು ನಮಗಿದೆ. –*ಸ್ವಾಮಿ ವಿವೇಕಾನಂದ*

ವ್ಯಕ್ತಿಗಳಲ್ಲಿ ಸದ್ಗುಣಗಳನ್ನು ನಿರ್ಮಿಸುವುದರಲ್ಲಿ ನಾವು ಸಫಲರಾದರೆ, ಸಮಾಜ ತಾನಾಗಿಯೆ ಸುಧಾರಿಸುತ್ತದೆ. ಶೀಲವು ನಾಗರಿಕತೆಯ ಆವಶ್ಯಕ ಅಂಶ. –*ಮಹಾತ್ಮ ಗಾಂಧೀ*

ಆತ್ಮಪ್ರಕಾಶ, ಪ್ರೇಮಗಳೆಂಬ ಸ್ಥಿರ ಸಂಪತ್ತನ್ನು ತಂದುಕೊಂಡು ಮಗುವನ್ನು ಸುಯೋಗ್ಯನನ್ನಾಗಿ, ಸತ್ಯವಂತನನ್ನಾಗಿ ಮಾಡುವುದೇ ಶಿಕ್ಷಣ. – *ರವೀಂದ್ರನಾಥ ಠಾಕೂರ್*

ಎಲ್ಲ ಬಗೆಯ ಶಿಕ್ಷಣದಲ್ಲಿ ನೀತಿ ಪ್ರಧಾನವಾಗಿರಬೇಕು, ಬುದ್ಧಿ ಎರಡನೆಯದಾಗಿರಬೇಕು. –*ರಸ್ಕಿನ್*

ವಿಶ್ವವಿದ್ಯಾನಿಲಯದ ನೇಮಕಾತಿಗಳಿಗೆ ಪ್ರತಿಭೆಯೇ ಆಧಾರವಾಗಿರಬೇಕು. ಈ ಮಾತಿನ ಅರ್ಥ ಮೀಸಲಾತಿ ನಿಯಮವನ್ನು ಕೈ ಬಿಡಬೇಕೆಂದಲ್ಲ, ಮೀಸಲಾತಿಯ ನಿಯಮದೊಳಗೆ ನೇಮಕ ಮಾಡುವಾಗಲೂ ಪ್ರತಿಭೆಯೇ ಆಧಾರವಾಗಬೇಕು. ಈ ಅನುಸರಣೆಯನ್ನು ಯಾವ ಕಾರಣಕ್ಕೂ ಕೈಬಿಡಬಾರದು. ಪ್ರತಿಭೆ ಹಾಗೂ ದಕ್ಷತೆ ಇಲ್ಲದವನು ಶಿಕ್ಷಕನಾಗಿ ನೇಮಕಗೊಂಡರೆ, ಅವನು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಭ್ರಷ್ಟಮಾರ್ಗವನ್ನು ಹಿಡಿಯುತ್ತಾನೆ. ವಿದ್ಯಾರ್ಥಿಗಳ ಒಲವನ್ನು ಗಳಿಸುವುದಕ್ಕಾಗಿ, ಪರೀಕ್ಷಾ ವ್ಯವಸ್ಥೆಯ ಅಡಿಗಲ್ಲುಗಳಾದ ಪ್ರಶ್ನೆಪತ್ರಿಕೆಗಳ ಗೌಪ್ಯತೆ ಮತ್ತು ನಿಷ್ಪಕ್ಷಪಾತವಾದ ಮೌಲ್ಯಮಾಪನವನ್ನು ಗಾಳಿಗೆ ತೂರುತ್ತಾನೆ. ವ್ಯವಸ್ಥೆಯೇ ಈ ರೀತಿ ಹದಗೆಟ್ಟಾಗ ಗುಣಮಟ್ಟದ ಸುಧಾರಣೆ ಮಾಡುವುದಾದರೂ ಹೇಗೆ?

ತ್ರಿಕರಣ ಪೀಡೆಗಳ ಮಾಯಾಜಾಲಕ್ಕೆ ಸಿಲುಕಿರುವ, ಶಿಕ್ಷಣಕ್ಷೇತ್ರದ ತಜ್ಞರಂತೆ ಸೋಗು ಹಾಕುತ್ತಿರುವ, ರಾಜಕಾರಣಿಗಳ ಕಪಿಮುಷ್ಟಿಯಿಂದ ನಮ್ಮ ಶಿಕ್ಷಣಸಂಸ್ಥೆಗಳನ್ನು ಮುಕ್ತಗೊಳಿಸಬೇಕು. ಅದನ್ನು ಕಾರ್ಯರೂಪಕ್ಕೆ ತರುವುದು ಹೇಳುವಷ್ಟು ಸುಲಭವಲ್ಲ, ಏಕೆಂದರೆ, ಎಲ್ಲ ಕ್ಷೇತ್ರಗಳಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಹಣಗಳಿಕೆಯ ಹುಚ್ಚು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

## ಶಿಕ್ಷಣದ ಭಾರತೀಕರಣ

ಪಾಶ್ಚಾತ್ಯ ವಿದ್ಯಾಸಂಸ್ಥೆಗಳ ಅನುಕರಣೆ ಇತ್ತೀಚೆಗೆ ಶಿಕ್ಷಣ ಕ್ಷೇತ್ರದಲ್ಲಿಯೂ ವ್ಯಾಪಕವಾಗಿ ಹೆಚ್ಚುತ್ತಿದೆ. ಭವ್ಯವಾದ ಮನಮೋಹಕ ಕಟ್ಟಡಗಳು, ಸುಂದರವಾದ ಹುಲ್ಲುಹಾಸುಗಳು, ಸುಸಜ್ಜಿತವಾದ ಕಾರ್ಯಾಗಾರಗಳು, ಆಧುನಿಕ ಯಂತ್ರಗಳು, ಆಧುನಿಕವಾಗಿದ್ದು ಮೆರುಗುವ ಪ್ರಾಂಶುಪಾಲರ ಕಚೇರಿಗಳು, ಸ್ವಾಗತದ ಕೋಣೆಗಳು - ಇವೆಲ್ಲಾ ನಿಜಕ್ಕೂ ಸ್ವಾಗತಾರ್ಹವೇ ಸರಿ. ಆದರೆ ಹಣದಿಂದ ದೊರಕುವ ಈ ಎಲ್ಲ ಸೌಲಭ್ಯಗಳಿಗಿಂತಲೂ ಹೆಚ್ಚಾಗಿ, ಮಾನವನ ವ್ಯಕ್ತಿತ್ವಸುಧಾರಣೆಗೆ ಬೇಕಾಗಿರುವ **ಒಳ್ಳೆಯ ಗುಣ, ಸಚ್ಚಾರಿತ್ರ್ಯ ಮತ್ತು ಪ್ರಾಮಾಣಿಕತೆಗಳು** ಮಾತ್ರ , ವಾಸ್ತವಿಕವಾಗಿ ಸುಧಾರಣೆಗಳನ್ನು ತರುವುದಕ್ಕೆ ಬೇಕಾಗಿರುವ ಅಂಶಗಳಾಗಿವೆ ಎನ್ನುವುದನ್ನು ಮರೆಯಬಾರದು. ಈಗಿನ ಪರಿಸ್ಥಿತಿಯಲ್ಲಿ ಪಾಶ್ಚಾತ್ಯರನ್ನು ಅನುಕರಿಸುವುದು ತಪ್ಪಲ್ಲ. **ಪ್ರತಿಭೆಗೆ ಯೋಗ್ಯ ಪುರಸ್ಕಾರ, ದಕ್ಷತೆ, ಸಮಯಪ್ರಜ್ಞೆ ಮತ್ತು ಮಾನವ ಸಂಪನ್ಮೂಲಗಳ ಅಭಿವೃದ್ಧಿ**-ಈ ವಿಷಯಗಳಲ್ಲಿ ಖಂಡಿತ ನಾವು ಪಾಶ್ಚಾತ್ಯರನ್ನು ಅನುಸರಿಸಬೇಕು. ಆದರೆ ಹಾಗೆ ಮಾಡುವಾಗ, ಭಾರತೀಯ ಸಾಂಸ್ಕೃತಿಕ ಮೌಲ್ಯಗಳಿಗೆ ಕುಂದುಂಟಾಗಬಾರದು. ಎಲ್ಲ ಹಂತಗಳಲ್ಲೂ ನಮ್ಮ ಶಿಕ್ಷಣ ಕ್ಷೇತ್ರವನ್ನು ತ್ರಿಕರಣ ಪೀಡೆಗಳಿಂದ ಮುಕ್ತಗೊಳಿಸಿ "ಭಾರತೀಕರಣ" ಮಾಡಬೇಕು.

## ಪ್ರತಿಭೆ ಅರಳಲಿ

ಭಾರತೀಕರಣವೆಂದರೇನು? ಭಾರತೀಕರಣವನ್ನು ಮಾಡುವುದಾದರೂ ಹೇಗೆ? ಇವುಗಳತ್ತ ಗಮನಹರಿಸೋಣ, ಕೋಟ್ಯಂತರ ಭಾರತೀಯರು ಬಡತನ ರೇಖೆಯ ಕೆಳಗೆ ಇದ್ದಾರೆ. ನೂರಕ್ಕೆ ತೊಂಬತ್ತು ಮಂದಿ ವಾಸಿಸುವುದು ಸೌಲಭ್ಯಗಳಿಂದ ವಂಚಿತವಾದ ಗ್ರಾಮೀಣ ಭಾಗಗಳಲ್ಲಿ. ನೂರಕ್ಕೆ ಹತ್ತರಷ್ಟು ಮಂದಿಯನ್ನು ಮಾತ್ರ ಭಾರಿ ಶ್ರೀಮಂತರೆಂದು ಕರೆಯಲಾಗದಿದ್ದರೂ, ಸರಿಸುಮಾರು ಶ್ರೀಮಂತರೆನ್ನಬಹುದು. ಇಂದು ಪ್ರಚಲಿತವಾಗಿರುವ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ಬಿಸಿ ತಟ್ಟಿರುವುದು ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಎಂಬುದು ನಿರ್ವಿವಾದ. ಎಲ್ಲ ಕ್ಷೇತ್ರಗಳಲ್ಲೂ ನಿಜವಾದ ಪ್ರತಿಭೆ ಇರುವುದು ಗ್ರಾಮೀಣ ಭಾಗಗಳಲ್ಲಿ ಎಂಬುದನ್ನು ನಾವು ಮರೆಯಬಾರದು. ಗ್ರಾಮೀಣ ಪ್ರದೇಶಗಳು ಮತ್ತು ಪಟ್ಟಣಗಳ ನಡುವಣ ಅಂತರ ದಿನೇ ದಿನೇ ಹೆಚ್ಚುತ್ತಿದೆ. ಆಧುನಿಕತೆಯ ಮೆರುಗಿಗೆ, ಥಳುಕು ಬೆರಗುಗಳಿಗೆ ಮೊರೆಹೋಗಿರುವ ನಮ್ಮ ತಾಂತ್ರಿಕ ಮತ್ತು ವೈದ್ಯಕೀಯ ವಿದ್ಯಾ ಸಂಸ್ಥೆಗಳಲ್ಲಿ ಗ್ರಾಮೀಣ ಭಾಗದ ಪ್ರತಿಭಾವಂತರು ಮತ್ತು ಪಟ್ಟಣ ಪ್ರದೇಶದ ಮಧ್ಯಮವರ್ಗದವರಿಗೆ ಸ್ಥಾನ ದೊರಕುವುದು ಕಷ್ಟ. ಹೀಗಾಗಬಾರದು. ಆದ್ದರಿಂದ, ಶಿಕ್ಷಣಕ್ಷೇತ್ರದಲ್ಲಿ ಪ್ರತಿಭಾವಂತರದೇ ಮೇಲುಗೈ ಆಗಬೇಕೇ ವಿನಾ ಶ್ರೀಮಂತರದ್ದಲ್ಲ.

## ಶಿಕ್ಷಣಕ್ಷೇತ್ರದ ಮಹಾಮಂತ್ರ

ಈ ನಿಟ್ಟಿನಲ್ಲಿ, ಭಾರತದ ಭವ್ಯ ಸಂಸ್ಕೃತಿಯಲ್ಲಿನ ವಿದ್ಯಾಭ್ಯಾಸದ ಪದ್ಧತಿಯತ್ತ ನಾವು ಗಮನಹರಿಸಬೇಕು. ಅಸಾಧಾರಣ ಬುದ್ಧಿವಂತರಾದ ಮಹಾನ್ ಋಷಿಗಳು ಪರ್ಣಕುಟೀರಗಳಲ್ಲಿ ವಾಸಿಸುತ್ತ, ಅಲ್ಲಿಗೆ ಜ್ಞಾನದಾಹಿಗಳಾಗಿ ಬಂದ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದ ಸಂಸ್ಕೃತಿ ನಮ್ಮದು. ಹಣಬಲವಿದ್ದವರಿಗೆ ಮಾತ್ರ ವಿದ್ಯೆ ಲಭ್ಯವೆನ್ನುವ ಪಾಶ್ಚಾತ್ಯ ನೀತಿಯನ್ನು ನಾವು ಮೊದಲು ಕೈಬಿಡಬೇಕು. ಆಧುನಿಕ ಸೌಲಭ್ಯಗಳನ್ನು ಏರ್ಪಡಿಸುವ ನೆಪದಲ್ಲಿ ನಮ್ಮ ವಿದ್ಯಾಸಂಸ್ಥೆಗಳು 'ಸುಲಿಗೆ'ಯ ಕೇಂದ್ರಗಳಾಗಲು ಖಂಡಿತ ಬಿಡಬಾರದು. ಎಲ್.ಕೆ.ಜಿ. ಯು.ಕೆ.ಜಿ. ಮಕ್ಕಳಿಂದಲೇ, ಅವರ ಶಿಕ್ಷಣಕ್ಕಾಗಿ, ಸಾವಿರಗಟ್ಟಲೆ ರೂಪಾಯಿಗಳಷ್ಟು ದೇಣಿಗೆ ಪಡೆಯುವುದು ನಮ್ಮ ಸಂವಿಧಾನದ ಮೂಲತತ್ತ್ವಗಳಿಗೆ ದ್ರೋಹ ಬಗೆದಂತೆ. ಚಿಕ್ಕ ಮಕ್ಕಳಿಗೆ ಶಾಲೆಯಲ್ಲಿ ಪ್ರವೇಶ ನೀಡಲು ಅವರ ತಂದೆತಾಯಿಗಳ ಸಂದರ್ಶನ ಮಾಡುವ ಅಗತ್ಯವಾದರೂ ಏನು? ಹೀಗೆ ಮಾಡುವ ಶಾಲೆಗಳು ನಿಜವಾಗಿ ಶಾಲೆಗಳಲ್ಲ, ಕೇವಲ ಹಣಸುಲಿಗೆಯ ಯಂತ್ರಗಳು. ಜೋಪಡಿಗಳಲ್ಲಿ ಪಾಠ ಹೇಳಿದರೂ ಚಿಂತೆಯಿಲ್ಲ, ಸಮರ್ಪಣಾಭಾವದಿಂದ ಪ್ರಾಮಾಣಿಕವಾಗಿ ಬೋಧಿಸುವ ಶಿಕ್ಷಕರಿಂದ ಬೋಧನೆ ನಡೆಯಲಿ. ಶ್ರೇಷ್ಠ ಮಟ್ಟದ ಶಿಕ್ಷಣವನ್ನು ನೀಡಲು ಮೊಸಾಯಿಕ್ ನೆಲ ಮತ್ತು ಪಾಲಿಷ್‌ನಿಂದ ಮೆರಗುವ ಕುರ್ಚಿಬೆಂಚುಗಳ ಅಗತ್ಯ ಖಂಡಿತ ಇಲ್ಲ. ಗ್ರಂಥಾಲಯ ಸೌಲಭ್ಯವನ್ನು ಒದಗಿಸುವುದೆಂದರೆ ಭವ್ಯವಾದ ಕಟ್ಟಡ ಕಟ್ಟುವುದಲ್ಲ, ಕಟ್ಟಡ ಸರಳವಾಗಿದ್ದೂ ಶ್ರೇಷ್ಠಮಟ್ಟದ ಗ್ರಂಥಗಳನ್ನು ನಾವು ಒದಗಿಸಬಹುದು ಮಾತ್ರವಲ್ಲ, ಒದಗಿಸಬೇಕು.

ಇನ್ನು ವೈದ್ಯಕೀಯ ಶಿಕ್ಷಣದ ಶೋಚನೀಯ ಪರಿಸ್ಥಿತಿ ಎಲ್ಲರಿಗೂ ತಿಳಿದಂಥದ್ದೇ. "ತ್ರಿಕರಣ" ಪೀಡೆಗೊಳಗಾಗಿ ಈಗ ಅಸ್ತಿತ್ವಕ್ಕೆ ಬರುತ್ತಿರುವ "ಹೈಟೆಕ್ ಆಸ್ಪತ್ರೆ"ಗಳು ಹಣಸುಲಿಗೆಯ ಕೇಂದ್ರಗಳಾಗುತ್ತಿರುವುದು ತುಂಬಾ ವಿಷಾದನೀಯ. ಅಲ್ಲಿ ಈಗ ಬಹುವಾಗಿ ಜಾರಿಗೆ ಬರುತ್ತಿರುವ "ಪ್ಯಾಕೇಜ್ ಡೀಲ್"ಗಳು (ಒಂದು ಆಸ್ಪತ್ರೆಯಲ್ಲಿ, ಅನಾವಶ್ಯಕವಾದ ಅನೇಕ ತಪಾಸಣೆಗಳನ್ನು ಮಾಡಿ, ದೇಹದ ರೋಗಗಳನ್ನು ಕಂಡುಹಿಡಿಯುವ ನೆವದಿಂದ ಸಾವಿರಾರು ರೂಪಾಯಿಗಳನ್ನು ಕಿತ್ತುಕೊಳ್ಳುವ ಸಂಕೀರ್ಣ ವ್ಯವಸ್ಥೆ.) ಪವಿತ್ರವಾದ ವೈದ್ಯಕೀಯ ಕ್ಷೇತ್ರದ ಮಾಲಿನ್ಯವೆಂದೇ ನಾವು ಕರೆಯಬಹುದು.

ಇಷ್ಟಕ್ಕೂ ಭಾರತೀಕರಣವೆಂದರೇನು? **ಬಡವರ ಕೂಗಿಗೆ ಓಗೊಡುವುದೇ ಭಾರತೀಕರಣ. ದೀನದಲಿತರ ನೋವಿಗೆ ಸ್ಪಂದಿಸಿ ಅವರ ಕಣ್ಣೀರೊರಸುವುದೇ ಭಾರತೀಕರಣ. ಸರಳ ಜೀವನ ಮತ್ತು ಉನ್ನತ ಚಿಂತನವನ್ನು ಒಂದು ಪವಿತ್ರ ಮೌಲ್ಯವಾಗಿ ಮಾರ್ಪಡಿಸುವುದೇ ಭಾರತೀಕರಣ. ಭಾರತೀಕರಣವೇ ನಮ್ಮ ಶಿಕ್ಷಣಕ್ಷೇತ್ರದ ಮಹಾಮಂತ್ರವಾಗಲಿ.**

ಒಬ್ಬನು ಶಾಲೆಯಲ್ಲಿ ಕಲಿತಿದ್ದನ್ನೆಲ್ಲ ಮರೆತುಬಿಟ್ಟರೂ ಮರೆಯದೇ ಯಾವುದು ಉಳಿಯುತ್ತದೆಯೋ ಅದೇ ಶಿಕ್ಷಣ - *ಐನ್‌ಸ್ಟೈನ್*